**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ** 5028/2024 ಪ್ರಾಸಾ-12
ಚಾಸಾ-3

ದಿನಾಂಕಃ 12-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಲಕ್ಷ್ಮಮ್ಮ |
| **ಗಂಡನ ಹೆಸರು** | ತಿಪ್ಪಣ್ಣ |
| **ವಯಸ್ಸು** | 70 ವರ್ಷ |
| **ಉದ್ಯೋಗ** | ಗೃಹಿಣಿ |
| **ವಾಸಸ್ಥಳ** | ದೇವರಬೆಟ್ಟ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಆರೋಪಿ ಮತ್ತು ಮೃತ ರತನಮ್ಮ ರವರ ಪರಿಚಯವಿರುತ್ತದೆ. ರತ್ನಮ್ಮ ನನ್ನ ಸಂಬಂಧಿಕಳಲ್ಲ. ರತ್ನಮ್ಮ ಳ ಸಾವಿಗೆ ಯಾರು ಕಾರಣ ಮತ್ತು ಹೇಗೆ ತೀರಿಕೊಂಡಳು ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ಈರಣ್ಣ ಮತ್ತು ಹೆಂಡತಿ ರತ್ನಮ್ಮ ಅವರ ಮಕ್ಕಳೊಂದಿಗೆ ನಮ್ಮ ಪಕ್ಕದ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ನಿಜ. ಆರೋಪಿ ಯಾವಾಗಲು ಕುಡಿದು ಬಂದು ಸಣ್ಣ ಪುಟ್ಟ ವಿಚಾರಕ್ಕೆ

ರತ್ನಮ್ಮಳಿಗೆ ಗಲಾಟೆ ಮಾಡಿ ನೀನು ಮನೆ ಬಿಟ್ಟು ಹೋಗಿ ಎಲ್ಲಾದಾರೂ ಸಾಯಿ ಎಂದು ಬೈಯುತ್ತಿದ್ದರು. ಆಗ ನಾನು ಬುದ್ದಿವಾದ ಹೇಳಿದೆ ಎಂದರೆ ಸರಿಯಲ್ಲ. ದಿನಾಂಕ 04.04.2024 ರಂದು 04.30 ಕ್ಕೆ ನಾನು ಮತ್ತು ಚಾಸಾ 4 ಇಬ್ಬರೂ ಮನೆ ಮುಂದೆ ಕುಳಿತು ಮಾತನಾಡುತ್ತಿದ್ದಾಗೆ ಆರೋಪಿ ಮನೆಗೆ ಬಂದು ಮೃತಳಿಗೆ ಮದ್ಯಪಾನ ಮಾಡಲು ರೂ.50 ಕೊಡು ಎಂದು ಕೇಳಿದ್ದು, ಅವಳು ಕೊಡಲು ನಿರಾಕರಿಸಿದಾಗ, ಆರೋಪಿ ನಿನ್ನ ಕಿವಿಯಲ್ಲಿದ್ದ ಗುಂಡು ಬಿಚ್ಚಿಕೊಡು ಅದನ್ನು ಅಡಮಾನ ಇಟ್ಟು ದುಡ್ಡು ತರುತ್ತೇನೆ ಎಂದು ಹೇಳಿದಾಗ, ಮೃತಳು ನಿರಾಕರಿಸಿದ್ದರಿಂದ ಒಬ್ಬರಿಗೊಬ್ಬರು ಗಲಾಟೆ ಆಗುತ್ತಿತ್ತು ಆಗ ಆರೋಪಿ ಅವಾಚ್ಯ ಶಬ್ದಗಳಿಂದ ಬೈಯುತ್ತ ದುಡ್ಡು ಕೇಳಿದರೆ ಇಲ್ಲ ಎಂದು ಸುಳ್ಳು ಹೇಳುತ್ತೀಯ ಎಂದು ಗಲಾಟೆ ಮಾಡಿ ನೀನು ನೇಣು ಹಾಕಿಕೊಂಡು ಸತ್ತರೆ ನನಗೆ ನೆಮ್ಮದಿ ಇರುತ್ತೆ ಎಂದು ಮನೆಯಿಂದ ಹೊರಗೆ ಬಂದು ಕುಳಿತನು ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಮನೆ ಒಳಗೆ ಹೋದ ರಾಹುಲ್ ಅಜ್ಜಿ ಅಮ್ಮ ಉರುಳು ಹಾಕಿಕೊಂಡಿದ್ದಾಳೆ ಬೇಗೆ ಬಾ ಎಂದು ಕೂಗಿದಾಗ ನಾನು, ಚಾಸಾ 4, ಆರೋಪಿ ಮ wuW ರಾಹುಲ್ ಹೋಗಿ ನೋಡಲಾಗಿ ರತ್ನಮ್ಮ ಅಡುಗೆ ಕೋಣೆಯ ಮೇಲ್ಚಾವಣಿಗೆ ಹಾಕಿದ ಕಬ್ಬಿಣದ ಹ್ಯಾಂಗಲರ್ ಗೆ ಸೀರೆ ಸಹಾಯದಿಂದ ತನ್ನ ಕುತ್ತಿಗೆಗೆ ನೇಣು ಹಾಕಿಕೊಂಡು ನೇಣು ಕುಣಿಕೆಯಲ್ಲಿ ನೇತಾಡುತ್ತಿದ್ದಳು, ಅವಳನ್ನು ನಾವು ಕೆಳಗೆ ಇಳಿಸಿದ್ದು ನಂತರ ಆರೋಪಿ ರತ್ನಮ್ಮಳನ್ನು ಆಂಬುಲನ್ಸ ನಲ್ಲಿ ಪಾವಗಡ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ರಾತ್ರಿ 10.30 ಗಂಟೆಗೆ ತುಮಕೂರಿಗೆ ಹೋಗುತ್ತಿರುವಾಗ ಕೊರಟಗೆರೆ ಸಜಮೀಪ ತೀರಿಕೊಂಡಿರುತ್ತಾಳಂದು ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ್ನು ನಿಪಿ 13 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ. PNR ವಕೀಲರಿಂದ ಆರೋಪಿ ಪರವಾಗಿ:-</u>**

**ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**